# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 884 (1019)

ಸದಸ್ಯರ ಹೆಸರು : ಶ್ರೀಮತಿ. ಬಲ್ಕೀಸ ಬಾನು (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 25.08.2026

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಶಿವಮೊಗ್ಗ ಜಿಲ್ಲೆಯಲ್ಲಿ ಅಕಾಲಿಕ ಮಳೆಗೆ ಅಡಿಕೆ ತೋಟ ಹಾನಿ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಗಮನಕ್ಕೆ ಬಂದಿದೆ. |
| ಆ) | ಬಂದಿದ್ದಲ್ಲಿ, ಸರ್ಕಾರದಿಂದ ಪರಿಹಾರ ವಿತರಿಸಲು ಕ್ರಮ ಕೈಗೊಳ್ಳಲಾಗಿದೆಯೇ; ಇದಕ್ಕಾಗಿ ಮೀಸಲಿಟ್ಟ ಹಣ ಎಷ್ಟು; | ಹೌದು,<br><br>SDRF/NDRF ಮಾರ್ಗಸೂಚಿಯನ್ವಯ ಪ್ರತಿ ಹೆಕ್ಟೇರ್ ಅಡಿಕೆ (ಬಹುವಾರ್ಷಿಕ) ಬೆಳೆಗೆ ರೂ.22500/- ಪರಿಹಾರ ಧನವನ್ನು ಕಂದಾಯ ಇಲಾಖೆಯ ಪರಿಹಾರ ತಂತ್ರಾಂಶದ ಮುಖಾಂತರ ವಿತರಿಸಲು ಜಂಟಿ ಸಮೀಕ್ಷೆ ಕೈಗೊಳ್ಳಲಾಗಿದೆ.<br><br>ಜಿಲ್ಲಾಧಿಕಾರಿಗಳ ವ್ಯಾಪ್ತಿಯ District Disaster Relief Fund ನಲ್ಲಿ ಲಭ್ಯವಿರುವ ಹಣದಿಂದ ಪರಿಹಾರವನ್ನು ಕಂದಾಯ ಇಲಾಖೆ ನೀಡುತ್ತದೆ. |
| ಇ) | ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಅಡಿಕೆ ಮರಗಳು ಹಾನಿಯಾಗಿದೆ; (ತಾಲ್ಲೂಕುವಾರು ವಿವರ ನೀಡುವುದು) | ಶಿವಮೊಗ್ಗ ಜಿಲ್ಲೆಯಲ್ಲಿ ಒಟ್ಟು 235621 ಅಡಿಕೆ ಮರಗಳು ಹಾನಿಯಾಗಿರುವುದಾಗಿ ಅಂದಾಜು ಮಾಡಲಾಗಿದೆ. ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿವೆ:- |

| ತಾಲ್ಲೂಕು | ಹಾನಿಯಾದ ಅಡಿಕೆ ಕ್ಷೇತ್ರ (ಹೆಕ್ಟೇರ್) | ಹಾನಿಯಾದ ಅಡಿಕೆ ಮರಗಳು (ಸಂಖ್ಯೆ) |
|---|---|---|
| ಭದ್ರಾವತಿ | 506.73 | 234487 |
| ಹೊಸನಗರ | 1.33 | 1062 |
| ತೀರ್ಥಹಳ್ಳಿ | 0.05 | 72 |
| ಒಟ್ಟು | 508.11 | 235621 |

<table>
<tr>
<td>ಈ)</td>
<td>ಪ್ರತಿ ಎಕರೆಗೆ ಅಥವಾ ಒಂದು ಅಡಿಕೆ ಮರಕ್ಕೆ ಎಷ್ಟು ಪರಿಹಾರವನ್ನು ಸರ್ಕಾರ ನಿಗದಿಪಡಿಸಿದೆ;</td>
<td>SDRF/NDRF ಮಾರ್ಗಸೂಚಿಯನ್ವಯ ಪ್ರತಿ ಹೆಕ್ಟೇರ್ ಅಡಿಕೆ (ಬಹುವಾರ್ಷಿಕ) ಬೆಳೆಗೆ ರೂ.22500/- ಪರಿಹಾರ ಧನವನ್ನು ಕಂದಾಯ ಇಲಾಖೆಯ ಪರಿಹಾರ ತಂತ್ರಾಂಶದ ಮುಖಾಂತರ ವಿತರಿಸಲಾಗುತ್ತದೆ.<br><br>ಪ್ರತಿ ಮರಕ್ಕೆ ಪರಿಹಾರ ನೀಡಲು ಅವಕಾಶವಿರುವುದಿಲ್ಲ.</td>
</tr>
<tr>
<td>ಉ)</td>
<td>ಇದುವರೆವಿಗೂ ಪರಿಹಾರ ಕೋರಿ ಸ್ವೀಕೃತಗೊಂಡಿರುವ ಅರ್ಜಿಗಳು ಎಷ್ಟು; ಎಷ್ಟು ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ; ಬಾಕಿ ಉಳಿದಿರುವ ಅರ್ಜಿಗಳು ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)</td>
<td>ಇದುವರೆಗೂ ಪರಿಹಾರ ಕೋರಿ ಒಟ್ಟು 4362 ಅರ್ಜಿಗಳನ್ನು ಕಂದಾಯ ಇಲಾಖೆಯ ಪರಿಹಾರ ತಂತ್ರಾಂಶದ ಮೂಲಕ ವಿಲೇವಾರಿ ಮಾಡಲಾಗುತ್ತದೆ.<br><br>ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿವೆ:-<br><br>
<table>
<tr><th>ತಾಲ್ಲೂಕು</th><th>ಪರಿಹಾರ ಕೋರಿ ಬಂದಿರುವ ಅರ್ಜಿ ಸಂಖ್ಯೆ</th></tr>
<tr><td>ಭದ್ರಾವತಿ</td><td>4330</td></tr>
<tr><td>ಹೊಸನಗರ</td><td>31</td></tr>
<tr><td>ತೀರ್ಥಹಳ್ಳಿ</td><td>1</td></tr>
<tr><td>ಒಟ್ಟು</td><td>4362</td></tr>
</table>
</td>
</tr>
</table>

ಸಂಖ್ಯೆ: HORTI 478 HGM 2026

(ಎಸ್. ಎಸ್. ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು